

## ‘ಟ್ಯೂಬ್‌ಲೈಟ್’ 100 ಕೋಟಿ

ಸಲ್ಮಾನ್ ಖಾನ್ ಅಭಿನಯದ ‘ಟ್ಯೂಬ್‌ಲೈಟ್’ ಮೊದಲ ವಾರದಲ್ಲೇ 100 ಕೋಟಿ ರೂಪಾಯಿ ಗಳಿಕೆಯ ಗಡಿಯನ್ನು ದಾಟಿದೆ. ಇದು 100 ಕೋಟಿ ಕಲೆಕ್ಷನ್ ದಾಟಿದ ಸಲ್ಮಾನ್‌ನ 11ನೆಯ ಸಿನಿಮಾ ಎನ್ನುವುದು ವಿಶೇಷವೇ. ಬಾಲಿವುಡ್‌ನಲ್ಲಿ ಇವತ್ತಿಗೂ ನಿರ್ಮಾಪಕರ ಅಚ್ಚುಮೆಚ್ಚಿನ ನಟರಲ್ಲಿ ಸಲ್ಮಾನ್ ಮುಂಚೂಣಿಯಲ್ಲಿ ಇದ್ದಾನೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಆದರೆ ‘ಬಾಹುಬಲಿ–2’ ಚಿತ್ರದ ಕಲೆಕ್ಷನ್ ಗೆ ಹೋಲಿಸಿದರೆ ಸಲ್ಮಾನ್ ನ ಹೊಸ ಚಿತ್ರದ ಕಲೆಕ್ಷನ್ ಕಡಿಮೆ ಎಂದೇ ಹೇಳಬೇಕು. ಬಾಹುಬಲಿ–2 ಈಗಲೂ ಬಾಲಿವುಡ್‌ನಲ್ಲಿ ಅತ್ಯಧಿಕ ಕಲೆಕ್ಷನ್ ತೋರಿಸುತ್ತಿದ್ದು, ನಿರ್ದೇಶಕ ಚಂದ್ರಮೌಳಿ ಸಾರ್ವಕಾಲಿಕ ದಾಖಲೆಯತ್ತ ದಾಪುಗಾಲು ಹಾಕುತ್ತಿದ್ದಾರೆ.

**extraordinary journey of the Fakir’** ಹೆಸರಿನ ಕಾದಂಬರಿ ಆಧಾರಿತ ಈ ಹಾಲಿವುಡ್ ಚಿತ್ರವನ್ನು ಕೆನ್ ಸ್ಕಾಟ್ ನಿರ್ದೇಶಿಸುತ್ತಿದ್ದಾರೆ. ‘ವಿಐಪಿ 2’ನಲ್ಲಿ ಕಾಜೋಲ್ ಅಭಿನಯದ ಬಗ್ಗೆ ಧನುಷ್‌ನದ್ದು ತುಂಬು ಮೆಚ್ಚುಗೆ. ‘ಕಾಜೋಲ್ ಮ್ಯಾಮ್ ಎನರ್ಜಿ ಬಗ್ಗೆ ಹೇಳೋದೇ ಬೇಡ. ಅವರು ಸೆಟ್‌ನಲ್ಲಿದ್ದರೆ ಉಳಿದ ನಟ ನಟಿಯರೂ ಚಾರ್ಜ್ ಆಗುತ್ತಿದ್ದರು, ಅಷ್ಟೊಂದು ಎನರ್ಜಿ...’ ಎಂದಿದ್ದಾನೆ ಧನುಷ್.

ಅಂದ ಹಾಗೆ ಧನುಷ್ ನಿರ್ಮಿಸಿ ನಟಿಸುತ್ತಿರುವ ಬಹುನಿರೀಕ್ಷೆಯ ‘ವಡಾ ಚೆನ್ನೈ’ ಸಿನಿಮಾದ ಮುಕ್ಕಾಲು ಮತ್ತಷ್ಟು ಮುಂದಕ್ಕೆ ಹೋಗಿದೆ. 2016ರಲ್ಲಿ ಶುರುವಾದ ಶೂಟಿಂಗ್ ಇನ್ನೂ ಮುಗಿದಿಲ್ಲ. ಆಸ್ಕರ್ ಪ್ರಶಸ್ತಿಗೆ ನಾಮಕರಣಗೊಂಡ ‘ವಿಸಾರಣೈ’ ಚಿತ್ರದ ನಿರ್ದೇಶಕ ವೆಟ್ರಿಮಾರನ್ ‘ವಡಾ ಚೆನ್ನೈ’ಯನ್ನೂ ನಿರ್ದೇಶಿಸುತ್ತಿದ್ದಾರೆ. ಆಸ್ಕರ್ ಪ್ರಶಸ್ತಿಯ ಪ್ರಚಾರದ ಹಿನ್ನೆಲೆಯಲ್ಲಿ ಅವರು ಮೂರು ತಿಂಗಳು ವಿದೇಶ ಪ್ರವಾಸ ಹೊರಟರು. ಈಗ ಧನುಷ್ ಒಂದೂವರೆ ತಿಂಗಳು ಬೆಲ್ಜಿಯಂ ವಾಸ. ‘ಅಲ್ಲಿಂದ ಹಿಂತಿರುಗಿದ ಬಳಿಕ ವಡಾ ಚೆನ್ನೈ ಶೂಟಿಂಗ್ ಮುಂದುವರಿಯಲಿದೆ. ಇನ್ನೂ 15 ದಿನಗಳ ಶೂಟಿಂಗ್ ಬಾಕಿ ಇದೆ’ ಎಂದಿದ್ದಾನೆ ಧನುಷ್.

■ **ಬಿಂದು**

## ಸೋನಾಕ್ಷಿಯ ತಿರುಗಾಟ

ಶೂಟಿಂಗ್‌ನಲ್ಲಿ ಎಷ್ಟೇ ಬ್ಯುಸಿ ಇದ್ದರೂ ಸೋನಾಕ್ಷಿ ಸಿನ್ಹಾ ತನ್ನ ವಾರ್ಷಿಕ ಪ್ರವಾಸವನ್ನು ತಪ್ಪಿಸಿಕೊಳ್ಳುವುದಿಲ್ಲ. ವರ್ಷದಲ್ಲಿ ಒಮ್ಮೆ ದೀರ್ಘ ರಜೆ ತೆಗೆದುಕೊಂಡು ಒಬ್ಬಂಟಿಯಾಗಿ ವಿದೇಶ ಪರ್ಯಟನೆ ಕೈಗೊಳ್ಳುವುದು ಆಕೆಯ ಅಭ್ಯಾಸ. ‘ಪ್ರವಾಸದಿಂದ ನಮ್ಮ ತಿಳುವಳಿಕೆಯೂ ಹೆಚ್ಚುತ್ತದೆ. ಜತೆಗೆ ನಟನೆಗೂ ಸಹಾಯವಾಗುತ್ತದೆ’ ಎನ್ನುವುದು ಆಕೆಯ ಸ್ಪಷ್ಟನುಡಿ. ಈ ಸಲ ಪೂರ್ವ ಆಫ್ರಿಕಾದ ಸೀಶೆಲ್ಸ್ ನಲ್ಲಿ ರಜಾ ದಿನಗಳನ್ನು ಕಳೆದಿರುವ ಸೋನಾಕ್ಷಿ, ಸಮುದ್ರ ತೀರದಲ್ಲಿ ಮನದಣಿಯೆ ಸುತ್ತಾಡಿದಳಂತೆ. ‘ಸಮುದ್ರ ಎಂದರೆ ನನಗೆ ತುಂಬ ಪ್ರೀತಿ. ಎಷ್ಟು ಹೊತ್ತು ಬೇಕಾದರೂ ನೀರಿನಲ್ಲೇ ಇರಬಲ್ಲೆ. ಅದರಲ್ಲೂ ವಾಟರ್‌ಸ್ಪೋರ್ಟ್ಸ್ ನಲ್ಲಿ ತೊಡಗಿದನೆಂದರೆ ದಿನ ಕಳೆದದ್ದೇ ಗೊತ್ತಾಗುವುದಿಲ್ಲ’ ಎನ್ನುತ್ತಾಳೆ ಆಕೆ. ಜತೆಗೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವದ ನಗರಗಳಲ್ಲಿ ಸುತ್ತಾಡುವುದು ಆಕೆಯ ಪ್ರಿಯವಾದ ಹವ್ಯಾಸ. ‘ತಿರುಗಾಟ ಎಂದರೆ ಜ್ಞಾನ’ ಎನ್ನುವುದು ಆಕೆಯ ಅಚಲ ನಂಬಿಕೆಯಂತೆ.

